# ಹಸುರು ಆವರಿಸುವ ‘ತಪಸಿ’

**ತಪಸಿ ಮರ, ಹಸುರು ಬೀಜಗಳಿಂದ ಕಂಗೊಳಿಸುವ ವೃಕ್ಷ. ಇದರ ಬೀಜಗಳು ಹಕ್ಕಿಗಳಿಗೆ ಆಹಾರ...**

■ ವಿನು ಗಂಗೆ



ಬೇಸಿಗೆಯಲ್ಲಿ ಒಂದು ದಿನ ನಮ್ಮ ಕಚೇರಿ ಎದುರಿನ ರಸ್ತೆಯಲ್ಲಿ ನಡೆಯುತ್ತಾ ಹೋಗುತ್ತಿದ್ದೆ. ಗಾಳಿಯಲ್ಲಿ ತೆಳ್ಳಗೆ ತಿಳಿ ಹಸುರು ಬಣ್ಣದ ವೃತ್ತಾಕಾರದ ಸುಂದರ ಹಾಳೆಯಂತಹ ಬೀಜಗಳು ತೇಲಿಬಂದವು. ಕಣ್ಸೆಳೆಯುವ ಬಣ್ಣ, ಆಕಾರ. ಹಿಂದೊಮ್ಮೆ ಒಣಗಿದ ಬೀಜಗಳಿಂದ ಸಸಿ ಬೆಳೆಸಿದ್ದರಿಂದ ಕೂಡಲೇ ಇದು ತಪಸಿ ಮರದ ಬೀಜ ಎಂದು ತಿಳಿಯಿತು.

ಕೋರಮಂಗಲದ ಕಾಂಕ್ರೀಟ್ ಕಾಡಲ್ಲಿ, ಮಲೆನಾಡಿನ ಕಾಡುಗಳಲ್ಲಿ ವಿರಳವಾಗಿರುವ ತಪಸಿ ಮರದ ಬೀಜ ನನಗೆ ಮುದ್ದಾಗಿ ಕಂಡಿತು. ಎಲ್ಲಿಂದ ತೇಲಿಬಂದವು ಎಂದು ಅರಸುತ್ತಾ ಮುಂದೆ ನಡೆದೆ.

ರಸ್ತೆಯ ಕೊಟ್ಟಕೊನೆಗೆ, ಜೀವದ ಸೆಲೆಯಂತೆ ದೊಡ್ಡ ತಪಸಿ ಮರ ಕಂಡೆ. ಸುತ್ತ ಕಾಮಗಾರಿ ನಡೆಯುತ್ತಿದ್ದರೂ, ಹಿಂದೊಮ್ಮೆ ಕಾಡಾಗಿದ್ದ ಕೋರಮಂಗಲದಲ್ಲಿ ಯಾವ ಕಾರಣದಿಂದಲೋ ಅಭಿವೃದ್ಧಿಯ ಜೆಸಿಬಿಗೆ ಬಲಿಯಾಗದೆ ಇದೊಂದು ತಪಸಿ ಮರ ಮಾತ್ರ ತಪಸ್ವಿಯಂತೆ ಅಚಲವಾಗಿ ಸಣ್ಣ ದಿಣ್ಣೆ ಮೇಲೆ ನಿಂತಿತ್ತು.

ತಪಸಿಯ ಮರಗಳು ಅತ್ಯಂತ ವಿರಳ ಎಂದು ಮಲೆನಾಡಿನ ನನ್ನ ಹಿರಿಯ ಸ್ನೇಹಿತರಾದ ಆನೆಗುಳಿ ಸುಬ್ಬರಾಯರು ಅದರ ಬೀಜದ ಶೋಧದಲ್ಲಿ ಇದ್ದುದು ನನಗೆ ತಿಳಿದಿತ್ತು. ಇಲ್ಲಿ ನೋಡಿದರೆ ದೊಡ್ಡ ತಪಸಿ ಮರದಲ್ಲಿ ಒಂದಲ್ಲ, ಎರಡಲ್ಲ, ಲಕ್ಷಾಂತರ ಬೀಜಗಳು ಒಂದೇ ಒಂದು ಎಲೆ ಇಲ್ಲದಂತೆ ಇಡೀ ಮರವನ್ನು ತುಂಬಿ ತೂಗಾಡುತ್ತಿವೆ!. ತಿಳಿ ಹಸುರಿನ ಚಿಕ್ಕ ಬೀಜಗಳಿಂದ ತುಂಬಿನಿಂತಿದ್ದ ಈ ಮರದ ಫೋಟೊ ತೆಗೆದು, ಕೂಡಲೇ ಅವರಿಗೆ ಕಳಿಸಿದೆ. ಆನಂದದಿಂದ ತಮಗೆ ಬೀಜಗಳನ್ನು ಕಳುಹಿಸಲು ಕೋರಿದರು. ಹಿಂದೆ ನನಗೆ ಅನೇಕ ಸಲ ಪ್ರತಿಫಲಾಪೇಕ್ಷೆಯಿಲ್ಲದೆ ಸಾಗರದ ಕಾಡುಗಳಿಂದ ಅಪರೂಪದ ಮರಗಳ ಬೀಜ ಕಳುಹಿಸುವ ಸುಬ್ಬರಾಯರಿಗೆ ಬೆಂಗಳೂರಿನಿಂದ ಬೀಜ ಕಳುಹಿಸುವ ಅವಕಾಶ ನನಗೆ!.



ಹೂವುಗಳಿಂದ, ಚಿಗುರಿನಿಂದ ಕಂಗೊಳಿಸುವ ಮರಗಳು ಎಷ್ಟೋ ಇವೆ. ಆದರೆ ಬೀಜಗಳಿಂದ ಕಂಗೊಳಿಸುವ ಮರ ನಾನು ಕಂಡಂತೆ ತಪಸಿ ಮಾತ್ರ. ಹಿಂದೆಲ್ಲ ಮಲೆನಾಡಿನ ಮಕ್ಕಳು ಗುಬ್ಬಿ ರೊಟ್ಟಿ ಅಂತ ಈ ಬೀಜದ ತಿರುಳನ್ನು ತಿನ್ನುತ್ತಿದ್ದರು. ಬಿಡಿಸಿದರೆ ಬಾದಾಮಿಯಂತಹ ರುಚಿಯುಳ್ಳ ಬೀಜ ಹಕ್ಕಿಗಳಿಗೆ ಆಹಾರ. ಹೆಚ್ಚು ತಿಂದರೆ ಪಿತ್ತವಾಗುತ್ತದೆ.

**Holoptelea integrifolia** ಇದರ ವೈಜ್ಞಾನಿಕ ಹೆಸರು. ಖಾರವಾಗಿರುವ ಇದರ ಎಲೆಗಳನ್ನು ಚೆನ್ನಾಗಿ ಅಗಿದು ಉಗಿಯುವುದು ಪಶ್ಚಿಮ ಘಟ್ಟಗಳ ಜನರು ಹಲ್ಲು ನೋವನ್ನು ಹೋಗಲಾಡಿಸಲು ಕಂಡ ಸುಲಭ ವಿಧಾನ. ಆದರೆ ನಾವು ಇದರ ಎಲೆಗಳನ್ನು ಅಗಿಯುವುದು ಕಷ್ಟಸಾಧ್ಯ. ಅಷ್ಟೊಂದು ಘಾಟು. ಮರದ ಇತರ ಭಾಗಗಳನ್ನು ಔಷಧವಾಗಿ ಬಳಸುತ್ತಾರಾದರೂ ಅದರ ಸ್ವಾನುಭವ ನನಗಿಲ್ಲ.

ಹೆಚ್ಚು ಶ್ರಮವಿಲ್ಲದೆ, ಹಾಕಿದ ಬೀಜಗಳು ವಾರದಲ್ಲಿ ಮೊಳಕೆಯೊಡೆಯುತ್ತವೆ. ಮೊದಲು ನಾನಿದ್ದ ನಮ್ಮ ಮುಖ್ಯವೃತ್ತ ಕಚೇರಿಯಲ್ಲಿ ಐದು ವರ್ಷಗಳ ಹಿಂದೆ ಸಹೋದ್ಯೋಗಿಗಳ ನೆರವಿನಿಂದ ಹಾಕಿದ ತಪಸಿ ಸಸಿ ಈಗ ಮರವಾಗಿದೆ.

ಕೆಲವೇ ವರ್ಷಗಳಲ್ಲಿ ಇನ್ನೂ ಹಲವು ಗುಬ್ಬಿರೊಟ್ಟಿಗಳು ಗಾಳಿಯಲ್ಲಿ ಹಾರಾಡಲು ತಯಾರಾಗಲಿವೆ. ಕೋರಮಂಗಲದ ದೊಡ್ಡ ತಪಸಿ ಮರ ಅಚಲವಾಗಿ ಎಂದಿಗೂ ನಿಂತಿರಲೆಂಬ ಆಶಯದೊಂದಿಗೆ ಇನ್ನಷ್ಟು ತಪಸಿ ಮರಗಳನ್ನು ಬೆಳೆಸೋಣವೇ?.

ಪ್ರತಿಕ್ರಿಯಿಸಿ: **feedback@sudha.co.in**